**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ**

**ಎಸ್.ಸಿ.ನಂಃ 201/ 2022**

**ಚಾಸಾ-3 ಪ್ರಾಸಾ-5**

| | | |
|---|---|---|
| ಸಾಕ್ಷಿದಾರರ ಹೆಸರು | : | ಯಶವಂತ |
| ತಂದೆಯ ಹೆಸರು | : | ಲೇಟ್ ಶಕುನಯ್ಯ |
| ವಯಸ್ಸು | : | 32 |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ತೇಜೂರು ಗ್ರಾಮ |

**ದಿನಾಂಕಃ 27.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ ಅಭಿಯೋಜನೆಯ ಪರವಾಗಿಃ-**

ಚಾಸಾ-2 ಗೊತ್ತು. ಚಾಸಾ-1 ಮತ್ತು ಚಾಸಾ-3 ರಿಂದ 5 ಗೊತ್ತಿಲ್. ನಾನು ಸಹಿ ಮಾಡುತ್ತೇನೆ. ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ಚಾಸಾ-1 ರವರು ಬಾಡಿಗೆ ಇದ್ದ ಮನೆಯ ಹತ್ತಿರ ಮಾಡಿರುತ್ತೇನೆ. ಸದರಿ ದಾಖಲೆ ಸ್ಥಳ ಮತ್ತ ಅಮಾನತ್ತು ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ದಿಃ 22.01.2022 ರಂದು ದ್ಯಾವಪ್ಪನ ಕೊಪ್ಪಲಿನಲ್ಲಿ ಚಾಸಾ-1 ರವರು ವಾಸವಾಗಿದ್ದಂತಹ ಬಾಡಿಗೆ ಮನೆಗೆ ಪೊಲೀಸರು ಮಹಜರ್ ಮಾಡಲು ಬಂದಾಗ ನಾನು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ. ಗಂಡ ಹೆಂಡತಿಯ ಜಗಳದ ವಿಚಾರವಾಗಿ ಪೊಲೀಸರು ಮಹಜರ್ ಮಾಡಲು ಬಂದಾಗ ನಾನು ಸಹಿ ಮಾಡಿದ್ದೆ. ಸ್ದಳದಲ್ಲಿ ಪೋಟೋ ತೆಗೆದಿರುತ್ತಾರೆ. ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಈಗ ತೋರಿಸುತ್ತಿರುವ ಪೋಟೋದಲ್ಲಿ ನಾನು, ಚಾಸಾ-1 ಮತ್ತು ಚಾಸಾ-2 ರವರು ಇರುತ್ತೇವೆ. ಸದರಿ ಪೋಟೋವನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದೆ.

(ಈ ಸಂದರ್ಭದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಶೀಲಿಸಿ, ಪಾಟೀಸವಾಲಿಗೆ ಅನುಮತಿ ನೀಡಿದೆ)

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ನಿಪಿ-2 ನ್ನು ಜರುಗಿಸುವ ಕಾಲಕ್ಕೆ ಚಾಸಾ-1 ರವರು ನೀಡಿದ ಚಾಸಾ-1 ಮತ್ತು 1ನೇ ಆರೋಪಿಯ ಮದುವೆಯ ಆಮಂತ್ರಣ ಪತ್ರಿಕೆ ಮತ್ತು ಮದುವೆಯ ಎರಡು ಪೋಟೊಗಳನ್ನು ಅಂದರೆ ನಿಪಿ-6 ಮತ್ತು 7 ನ್ನು ನೀಡಿದ್ದು, ಅವುಗಳನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿದ್ದರು ಎಂದರೆ ಗೊತ್ತಿಲ್ಲ. ನಿಪಿ-2 ನ್ನು ಜರುಗಿಸುವ ಕಾಲಕ್ಕೆ ಚಾಸಾ-1 ರವರು ನಿಪಿ-6 ಮತ್ತು 7 ನ್ನು ಕೊಟ್ಟಿದ್ದು ಮತ್ತು ಅವುಗಳನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿದ್ದ ಬಗ್ಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆಪಾದಿತರ ಪರ ಶ್ರೀ ಎ ಜೆ ಆರ್ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**ಮರು ವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀರಣಗೊಳಿಸಿ ಮುದ್ರಿಸಲಾಯಿತು.)**

ಓ ಹೇ ಕೇ ಸ ಇದೆ

(ರೂಪಾ ಆರ್. ಕುಲಕರ್ಣಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಹಾಸನ.